

ಸೇರಿರಲಿಲ್ಲ ಬಿಡಿ, ಧರ್ಮಸ್ಥಳ ಮೇಳದ ಆಟ ಇದ್ದಾಗಲೂ ಇಷ್ಟು ಜನ ಬಂದಿರಲಿಲ್ಲ' ಎಂದು ಜನ ಮಾತನಾಡಿಕೊಂಡರು.

ಗಜಮುಖನೆ ಗಣಪತಿಯೆ ನಿನಗೆ ವಂದನೆ ಗೀತೆಯೊಂದಿಗೆ ನಾಟಕ ಶುರುವಾಯಿತು. ಮೊದಲ ದೃಶ್ಯದಲ್ಲಿ ನಟಿ ರಂಗ ಪ್ರವೇಶ ಮಾಡುತ್ತಿದ್ದಂತೆ, ಪ್ರೇಕ್ಷಕರ ಶಿಳ್ಳೆಗಳು ಟೆಂಟನ್ನು ಸೀಳಿ ಹಾಕುವುದೇನೋ ಎಂಬಂತೆ ಭಾಸವಾಯಿತು. ಒಂದೊಂದೇ ಅಂಕಗಳು ಸರಿಯುತ್ತಿದ್ದಂತೆ ಜನ ಮೈಮರೆತು ನಾಟಕ ವೀಕ್ಷಿಸತೊಡಗಿದರು. ನಟಿಯ ನಾಟ್ಯ ನೋಡುತ್ತ ಬೊಚ್ಚುಬಾಯಗಲಿಸಿ ಮುಂದಿನ ಸಾಲಿನಲ್ಲಿ ಕಲ್ಲಿನಂತೆ ಕೂತಿದ್ದ ಪಟೇಲರು, ಬಾಯಿಂದ ಪ್ರಾಣ ಬಿಟ್ಟರೇನೊ ಎಂಬಂತೆ ತೋರುತ್ತಿತ್ತು!

ಪೈಮಾಮ್ ನೇಪಥ್ಯದಲ್ಲಿ ಅತ್ತಿಂದಿತ್ತ ಓಡುತ್ತ, ಡೈಲಾಗ್ ನೆನಪಿಸುತ್ತ ಪಾತ್ರಧಾರಿಗಳನ್ನು ಹುರಿದುಂಬಿಸುವ ಕಾಯಕದಲ್ಲಿ ಮೈಮರೆತಿದ್ದರು. ಮುಂದಿನದು ನಾಯಕ ಮತ್ತು ನಾಯಕಿಯ ನಡುವೆ ವೈಮನಸ್ಸು ಸಿಡಿಯುವ ದೃಶ್ಯ. ನೆಕ್ಸ್ಟ್ ಹೀರೊ–ಹೀರೋಯಿನ್, ''ಸೀನ್... ರೆಡೀ...'' ಎಂದು ಪೈಮಾಮ್ ಗಡಬಡಿಸಿ ನೋಡಿದರೆ ನೇಪಥ್ಯದಲ್ಲಿ ಅವರಿಬ್ಬರ ಪತ್ತೆಯೇ ಇಲ್ಲ! ಎಲ್ಲಿ ಸತ್ತು ಸುಡುಗಾಡಿಗೆ ಹೋದರು ಮಾರಾಯಾ ಇವರು? ಸೀನ್ ಶುರುವಾಗಬೇಕಲ್ಲ ಇವರದೀಗ ಎಂದು ಪೈಗಳು ಆ ಕಡೆ ಈ ಕಡೆ ಪರದೆ ಎಳೆದೂಎಳೆದು ನೋಡಿದರೂ ಅವರಿಬ್ಬರು ಪತ್ತೆಯಾಗಲಿಲ್ಲ. ಸ್ಟೇಜ್ ಮುಂದೆ ಜನ ಹೋ... ಎಂದು ಗದ್ದಲ ಶುರು ಮಾಡಿದರು. ಸ್ವತಃ ಪೈಮಾಮ್ ಮೈಕ್ ಹಿಡಿದು, ''ಆತ್ಮೀಯ ಕಲಾ ಪೋಷಕರೇ ದಯವಿಟ್ಟು ಶಾಂತವಾಗಿರಿ... ಇನ್ನು ಕೆಲವೇ ನಿಮಿಷಗಳಲ್ಲಿ ನಾಟಕ ಶುರುವಾಗಲಿದೆ'' ಎಂದು ಮನವಿ ಮಾಡಿದರು. ''ಇರೋಯಿನ್ ನಾ ಕರೆಸೋ ಪೈಮಾಮ್... ನಟೀದು ಒಂದು ಡ್ಯಾನ್ಸ್ ಬರಲಿ, ಪೈಮಾಮ್'' ಎಂದೆಲ್ಲ ಪಡ್ಡೆ ಹುಡುಗರು ಡಿಮ್ಯಾಂಡ್ ಮಾಡಲಾರಂಭಿಸಿದರು.